# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 364 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ ( ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 07.07.2023 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕೇಂದ್ರ ಸರ್ಕಾರ ವಿಶೇಷ ಚೇತನರಿಗೆ ಸರ್ಕಾರಿ ಹುದ್ದೆಗಳಲ್ಲಿ ಇತ್ತೀಚೆಗೆ ಮೀಸಲಾತಿ ಹೆಚ್ಚಳ ಮಾಡಿ, ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ. | ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ಮೀಸಲಾತಿ ಹೆಚ್ಚಳ ಮಾಡಲಾಗಿದೆ; | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–2016ರ ಕಲಂ 34(1)ರಲ್ಲಿ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ ಪ್ರತಿ ವೃಂದಗಳಲ್ಲಿ ಶೇ.4ರಷ್ಟು ಕಡಿಮೆ ಇಲ್ಲದಂತೆ ಹುದ್ದೆಗಳನ್ನು ಮೀಸಲಿರಿಸಲಾಗಿದೆ.. ಅಧಿನಿಯಮದ ಪ್ರತಿಯನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ. |
| ಇ. | ಕೇಂದ್ರ ಸರ್ಕಾರದ ಆದೇಶದಂತೆ ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳ ಮಾಡದಿರಲು ಕಾರಣಗಳೇನು; | ಅದರನ್ವಯ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 149 ಎಸ್‌ಆರ್‌ಆರ್ 2020, ದಿನಾಂಕ:25.09.2020ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್–ಎ ಮತ್ತು ಗ್ರೂಪ್–ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ವಿಕಲಚೇತನರಿಗೆ ಶೇ.4ರಷ್ಟು ಹಾಗೂ ಗ್ರೂಪ್–ಸಿ ಮತ್ತು ಗ್ರೂಪ್–ಡಿ ಹುದ್ದೆಗಳಲ್ಲಿ ಶೇ.5ರಷ್ಟು ಹುದ್ದೆಗಳನ್ನು ಮೀಸಲಿರಿಸಿ ಆದೇಶಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ. |
| ಈ. | ಯಾವ ಕಾಲಮಿತಿಯಲ್ಲಿ ಮೀಸಲಾತಿ ಹೆಚ್ಚಳ ಮಾಡಲಾಗುವುದು? | ಅನ್ವಯಿಸುವುದಿಲ್ಲ. |

**ಸಂಖ್ಯೆ: ಮಮಇ 124 ಪಿಹೆಚ್‌ಪಿ 2023**

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

ಸಚಿವರು

ಅನುಬಂಧ-1

रजिस्ट्री सं॰ डी॰ एल॰—(एन)04/0007/2003—16 REGISTERED NO. DL—(N)04/0007/2003—16

# भारत का राजपत्र
# The Gazette of India

असाधारण
EXTRAORDINARY
भाग II — खण्ड 1
PART II — Section 1
प्राधिकार से प्रकाशित
PUBLISHED BY AUTHORITY

सं॰ 59] नई दिल्ली, बुधवार, दिसम्बर 28, 2016/पौष 07, 1938 (शक)
No. 59] NEW DELHI, WEDNESDAY, DECEMBER 28, 2016/PAUSHA 07, 1938 (SAKA)

इस भाग में भिन्न पृष्ठ संख्या दी जाती है जिससे कि यह अलग संकलन के रूप में रखा जा सके।
Separate paging is given to this Part in order that it may be filed as a separate compilation.

## MINISTRY OF LAW AND JUSTICE
**(Legislative Department)**

*New Delhi, the 28th December,* 2016/*Pausha* 17, 1938 (*Saka*)

The following Act of Parliament received the assent of the President on the 27th December, 2016, and is hereby published for general information:—

## THE RIGHTS OF PERSONS WITH DISABILITIES ACT, 2016

(No. 49 OF 2016)

[27*th December,* 2016]

An Act to give effect to the United Nations Convention on the Rights of Persons with Disabilities and for matters connected therewith or incidental thereto.

WHEREAS the United Nations General Assembly adopted its Convention on the Rights of Persons with Disabilities on the 13th day of December, 2006;

AND WHEREAS the aforesaid Convention lays down the following principles for empowerment of persons with disabilities,—

(*a*) respect for inherent dignity, individual autonomy including the freedom to make one's own choices, and independence of persons;

(*b*) non-discrimination;

(*c*) full and effective participation and inclusion in society;

(*d*) respect for difference and acceptance of persons with disabilities as part of human diversity and humanity;

(*e*) equality of opportunity;

(*f*) accessibility;

(*g*) equality between men and women;

(*h*) respect for the evolving capacities of children with disabilities and respect for the right of children with disabilities to preserve their identities;

AND WHEREAS India is a signatory to the said Convention;

AND WHEREAS India ratified the said Convention on the 1st day of October. 2007;

AND WHEREAS it is considered necessary to implement the Convention aforesaid.

BE it enacted by Parliament in the Sixty-seventh Year of the Republic of India as follows:—

## CHAPTER I

### PRELIMINARY

Short title and commencement.

1. (*1*) This Act may be called the Rights of Persons with Disabilities Act, 2016.

(*2*) It shall come into force on such date as the Central Government may, by notification in the Official Gazette, appoint.

Definitions.

2. In this Act, unless the context otherwise requires,—

(*a*) "appellate authority" means an authority notified under sub-section (*3*) of section 14 or sub-section (*1*) of section 53 or designated under sub-section (*1*) of section 59, as the case may be;

(*b*) "appropriate Government" means,—

(*i*) in relation to the Central Government or any establishment wholly or substantially financed by that Government, or a Cantonment Board constituted under the Cantonments Act, 2006, the Central Government; 41 of 2006.

(*ii*) in relation to a State Government or any establishment, wholly or substantially financed by that Government, or any local authority, other than a Cantonment Board, the State Government.

(*c*) "barrier" means any factor including communicational, cultural, economic, environmental, institutional, political, social, attitudinal or structural factors which hampers the full and effective participation of persons with disabilities in society;

(*d*) "care-giver" means any person including parents and other family Members who with or without payment provides care, support or assistance to a person with disability;

(*e*) "certifying authority" means an authority designated under sub-section (*1*) of section 57;

(*f*) "communication" includes means and formats of communication, languages, display of text, Braille, tactile communication, signs, large print, accessible multimedia, written, audio, video, visual displays, sign language, plain-language, human-reader, augmentative and alternative modes and accessible information and communication technology;

(*g*) "competent authority" means an authority appointed under section 49;

(*h*) "discrimination" in relation to disability, means any distinction, exclusion, restriction on the basis of disability which is the purpose or effect of impairing or nullifying the recognition, enjoyment or exercise on an equal basis with others of all human rights and fundamental freedoms in the political, economic, social, cultural, civil or any other field and includes all forms of discrimination and denial of reasonable accommodation;

## CHAPTER VI

### SPECIAL PROVISIONS FOR PERSONS WITH BENCHMARK DISABILITES

Free education for children with benchmark disabilities.

**31.** *(1)* Notwithstanding anything contained in the Rights of Children to Free and Compulsory Education Act, 2009, every child with benchmark disability between the age of six to eighteen years shall have the right to free education in a neighbourhood school, or in a special school, of his choice. 35 of 2009

*(2)* The appropriate Government and local authorities shall ensure that every child with benchmark disability has access to free education in an appropriate environment till he attains the age of eighteen years.

Reservation in higher educational institutions.

**32.** *(1)* All Government institutions of higher education and other higher education institutions receiving aid from the Government shall reserve not less than five per cent. seats for persons with benchmark disabilities.

*(2)* The persons with benchmark disabilities shall be given an upper age relaxation of five years for admission in institutions of higher education.

Identification of posts for reservation.

**33.** The appropriate Government shall—

*(i)* identify posts in the establishments which can be held by respective category of persons with benchmark disabilities in respect of the vacancies reserved in accordance with the provisions of section 34;

*(ii)* constitute an expert committee with representation of persons with benchmark disabilities for identification of such posts; and

*(iii)* undertake periodic review of the identified posts at an interval not exceeding three years.

Reservation.

**34.** *(1)* Every appropriate Government shall appoint in every Government establishment, not less than four per cent. of the total number of vacancies in the cadre strength in each group of posts meant to be filled with persons with benchmark disabilities of which, one per cent. each shall be reserved for persons with benchmark disabilities under clauses *(a)*, *(b)* and *(c)* and one per cent. for persons with benchmark disabilities under clauses *(d)* and *(e)*, namely:—

*(a)* blindness and low vision;

*(b)* deaf and hard of hearing;

*(c)* locomotor disability including cerebral palsy, leprosy cured, dwarfism, acid attack victims and muscular dystrophy;

*(d)* autism, intellectual disability, specific learning disability and mental illness;

*(e)* multiple disabilities from amongst persons under clauses *(a)* to *(d)* including deaf-blindness in the posts identified for each disabilities:

Provided that the reservation in promotion shall be in accordance with such instructions as are issued by the appropriate Government from time to time:

Provided further that the appropriate Government, in consultation with the Chief Commissioner or the State Commissioner, as the case may be, may, having regard to the type of work carried out in any Government establishment, by notification and subject to such conditions, if any, as may be specified in such notifications exempt any Government establishment from the provisions of this section.

*(2)* Where in any recruitment year any vacancy cannot be filled up due to non-availability of a suitable person with benchmark disability or for any other sufficient reasons, such vacancy shall be carried forward in the succeeding recruitment year and if in the succeeding recruitment year also suitable person with benchmark disability is not available, it may first be filled by interchange among the five categories and only when there is no person with disability available for the post in that year, the employer shall fill up the vacancy by appointment of a person, other than a person with disability:

Provided that if the nature of vacancies in an establishment is such that a given category of person cannot be employed, the vacancies may be interchanged among the five categories with the prior approval of the appropriate Government.

(3) The appropriate Government may, by notification, provide for such relaxation of upper age limit for employment of persons with benchmark disability, as it thinks fit.

Incentives to employers in private sector.

35. The appropriate Government and the local authorities shall, within the limit of their economic capacity and development, provide incentives to employer in private sector to ensure that at least five per cent. of their work force is composed of persons with benchmark disability.

Special employment exchange.

36. The appropriate Government may, by notification, require that from such date, the employer in every establishment shall furnish such information or return as may be prescribed by the Central Government in relation to vacancies appointed for persons with benchmark disability that have occurred or are about to occur in that establishment to such special employment exchange as may be notified by the Central Government and the establishment shall thereupon comply with such requisition.

Special schemes and development programmes.

37. The appropriate Government and the local authorities shall, by notification, make schemes in favour of persons with benchmark disabilities, to provide,—

(a) five per cent. reservation in allotment of agricultural land and housing in all relevant schemes and development programmes, with appropriate priority to women with benchmark disabilities;

(b) five per cent. reservation in all poverty alleviation and various developmental schemes with priority to women with benchmark disabilities;

(c) five per cent. reservation in allotment of land on concessional rate, where such land is to be used for the purpose of promoting housing, shelter, setting up of occupation, business, enterprise, recreation centres and production centres.

## CHAPTER VII

### SPECIAL PROVISIONS FOR PERSONS WITH DISABILITIES WITH HIGH SUPPORT NEEDS

Special provisions for persons with disabilities with high support.

38. (1) Any person with benchmark disability, who considers himself to be in need of high support, or any person or organisation on his or her behalf, may apply to an authority, to be notified by the appropriate Government, requesting to provide high support.

(2) On receipt of an application under sub-section (1), the authority shall refer it to an Assessment Board consisting of such Members as may be prescribed by the Central Government.

(3) The Assessment Board shall assess the case referred to it under sub-section (1) in such manner as may be prescribed by the Central Government, and shall send a report to the authority certifying the need of high support and its nature.

(4) On receipt of a report under sub-section (3), the authority shall take steps to provide support in accordance with the report and subject to relevant schemes and orders of the appropriate Government in this behalf.

## CHAPTER VIII

### DUTIES AND RESPONSIBILITIES OF APPROPRIATE GOVERNMENTS

Awareness campaigns.

39. (1) The appropriate Government, in consultation with the Chief Commissioner or the State Commissioner, as the case may be, shall conduct, encourage, support or promote awareness campaigns and sensitisation programmes to ensure that the rights of the persons with disabilities provided under this Act are protected.

(2) The programmes and campaigns specified under sub-section (1) shall also,—

(a) promote values of inclusion, tolerance, empathy and respect for diversity;

(b) advance recognition of the skills, merits and abilities of persons with disabilities and of their contributions to the workforce, labour market and professional fee;

ಅನುಬಂಧ-2


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – 1 | ಬೆಂಗಳೂರು, ಶನಿವಾರ, ೨೬,ಸೆಪ್ಟೆಂಬರ್,೨೦೨೦( ಆಶ್ವಯುಜ,೦೪, ಶಕವರ್ಷ ೧೯೪೨)<br>Bengaluru, SATURDAY, 26, SEPTEMBER, 2020( Aashwayuja,04, ShakaVarsha 1942) | ನಂ. ೪೧೫<br>No. 415 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರನೇಮಕಾತಿಗಳಲ್ಲಿ ಅಂಗವಿಕಲ / ವಿಕಲಚೇತನರಿಗೆ ಕಲ್ಪಿಸಿರುವ ಸಮತಳ ಮೀಸಲಾತಿಯನ್ನು ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ: 1. ದಿನಾಂಕ 01.08.2009ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 128 ಸೆನೆನಿ 2006.

2. ದಿನಾಂಕ 10.06.2013ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 48 ಸೆನೆನಿ 2012.

**ಪ್ರಸ್ತಾವನೆ:**

1. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ರಲ್ಲಿ ರಾಜ್ಯ ಸಿವಿಲ್ ಸೇವಗಳಲ್ಲಿನ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ / ವಿಕಲಚೇತನರಿಗೆ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿತ್ತು. ಈ ಮೀಸಲಾತಿಯನ್ನು ಜಾರಿಗೊಳಿಸಲು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾದ ಪ್ರತಿಯೊಂದು ನೇರ ಮೀಸಲಾತಿಯಡಿ 20 ಬಿಂದುಗಳ ಒಂದು ರೋಸ್ಟರನ್ನು ನಿಗದಿಪಡಿಸಿ, ಅದರಲ್ಲಿ ರೋಸ್ಟರಿನ ಪ್ರತಿ 19ನೇ ಬಿಂದುವನ್ನು ಅಂಗವಿಕಲರಿಗೆ/ ವಿಕಲಚೇತನರಿಗೆ ಗುರುತಿಸಲಾಗಿತ್ತು.

2. The Persons with Disabilities (Equal Opportunity, Protection of Rights and Full Participation) Act, 1995 ಜಾರಿಗೆ ಬಂದ ನಂತರದಲ್ಲಿ ಮೇಲ್ಕಂಡ ನಿಯಮಗಳ ನಿಯಮ 9 (1ಎ)ಗೆ ದಿನಾಂಕ 03.09.2005ರ ಅಧಿಸೂಚನೆ ಸಂಖ್ಯೆ. ಡಿಪಿಎಆರ್ 50 ಎಸ್ ಆರ್ ಆರ್ 2000ದಲ್ಲಿ ತಿದ್ದುಪಡಿ ಮಾಡಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ/ ವಿಕಲಚೇತನರಿಗೆ ಶೇಕಡ 3ರಷ್ಟು ಹಾಗೂ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಈ ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾದ ಪ್ರತಿಯೊಂದು ನೇರ ಮೀಸಲಾತಿಯಡಿ 20 ಬಿಂದುಗಳ ರೋಸ್ಟರನ್ನು ನಿಗದಿಪಡಿಸಿ. ಅದರಲ್ಲಿ ರೋಸ್ಟರಿನ ಪ್ರತಿ 4ನೇ ಬಿಂದುವನ್ನು ಅಂಗವಿಕಲರಿಗೆ ಗುರುತಿಸಲಾಗಿರುತ್ತದೆ.



www.ksge.in

3. ಮೇಲೆ (1)ರಲ್ಲಿ ಓದಲಾದ ದಿನಾಂಕ 01.08.2009ರ ಆದೇಶದಲ್ಲಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ನಿಗದಿಪಡಿಸಿರುವ ಶೇಕಡ 5ರ ಮೀಸಲಾತಿಯಲ್ಲಿ ಶೇ.2ನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ, ತಲಾ ಶೇ.1ನ್ನು ಶ್ರವಣ ದೋಷವುಳ್ಳವರಿಗೆ, ಚಲನವಲನ ವೈಕಲ್ಯವುಳ್ಳವರಿಗೆ ಮತ್ತು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ ಬುದ್ಧಿಮಾಂದ್ಯತೆ/ ಮಾನಸಿಕ ಅಸ್ವಸ್ಥತೆ (Mental retardation/ Mental illness) ಹೊಂದಿರುವವರಿಗೆ ಮೀಸಲಿರಿಸಲು ಆದೇಶಿಸಲಾಗಿರುತ್ತದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ 04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸೇನೆನಿ 2007ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಅದರಲ್ಲಿ 4, 24ನೇ ಬಿಂದುಗಳನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ, 44ನೇ ಬಿಂದುವನ್ನು ಶ್ರವಣ ದೋಷವುಳ್ಳವರಿಗೆ, 64ನೇ ಬಿಂದುವನ್ನು ಚಲನವಲನ ವೈಕಲ್ಯ ಇರುವವರಿಗೆ ಮತ್ತು 84ನೇ ಬಿಂದುವನ್ನು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ ಬುದ್ಧಿಮಾಂದ್ಯತೆ/ ಮಾನಸಿಕ ಅಸ್ವಸ್ಥತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದೆಂದು ಮತ್ತು ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲ/ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಬೇರೆ ಅಂಗವಿಕಲತೆ / ವಿಕಲಚೇತನ ಇರುವವರನ್ನು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ.

4. ಮೇಲೆ (2)ರಲ್ಲಿ ಓದಲಾದ ದಿನಾಂಕ: 10.06.2013ರ ಆದೇಶದಲ್ಲಿ, ದಿನಾಂಕ: 05.09.2005ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 107 ಸೇನೆನಿ 2005ನ್ನು ಪರಿಷ್ಕರಿಸಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ/ ವಿಕಲಚೇತನರಿಗೆ ಕಲ್ಪಿಸಿರುವ ಶೇಕಡ 3ರಷ್ಟು ಸಮತಳ ಮೀಸಲಾತಿಯೂ ಒಳಗೊಂಡಂತೆ ಇತರೆ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ಪ್ರತಿ ನೂರರ ಒಂದು ಸಮೂಹದಲ್ಲಿ ಪ್ರತಿ 4, 44 ಮತ್ತು 84ನೇ ರೋಸ್ಟರ್ ಬಿಂದುಗಳನ್ನು ಅಂಗವಿಕಲ/ ವಿಕಲಚೇತನ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದೆಂದು ಆದೇಶಿಸಲಾಗಿದೆ. 4ನೇ ಬಿಂದುವನ್ನು ದೃಷ್ಟಿಮಾಂದ್ಯ (blindness or low vision), 44ನೇ ಬಿಂದುವನ್ನು ಶ್ರವಣದೋಷ (hearing impairment) ಮತ್ತು 84ನೇ ಬಿಂದುವನ್ನು ಚಲನವಲನ ವೈಕಲ್ಯ (locomotor disability or cerebral palsy) ಅಂಗವಿಕಲತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದೆಂದು ಮತ್ತು ಒಂದು ವೇಳೆ ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಗುರುತಿಸಲಾದ ಬೇರೆ ಅಂಗವಿಕಲತೆಯುಳ್ಳವರನ್ನು ಈ ಬಿಂದುಗಳೆದುರು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ. ಸದರಿ ಆದೇಶವು ಭವಿಷ್ಯವರ್ತಿಯಾಗಿ ಜಾರಿಗೆ ಬಂದಿರುತ್ತದೆ. ಈ ಆದೇಶದ ಪೂರ್ವದಲ್ಲಿ ದಿನಾಂಕ: 05.09.2005ರ ಆದೇಶದನ್ವಯ ನಿಗದಿಪಡಿಸಿರುವ ರೋಸ್ಟರನ್ನು ಜಾರಿಗೊಳಿಸಿದ್ದಲ್ಲಿ, ಪ್ರತಿ ವರ್ಗದಡಿಯಲ್ಲಿ ಸಮತಳ ಮೀಸಲಾತಿ ರೋಸ್ಟರಿನ 4ನೇ ಬಿಂದುವನ್ನು ದಾಟಿದ್ದಲ್ಲಿ, 20ನೇ ಬಿಂದುವನ್ನು ತಲುಪದಿದ್ದಲ್ಲಿ, 20ನೆಯ ಬಿಂದುವಿನವರೆಗೆ ಆ ರೋಸ್ಟರನ್ನು ಚಾಲನೆಗೊಳಿಸತಕ್ಕದ್ದೆಂದು ಹಾಗೂ ನಂತರದಲ್ಲಿ ಒಂದನೇ ಬಿಂದುವಿನಿಂದ ಈ ಆದೇಶದಂತೆ ರೋಸ್ಟರನ್ನು ಚಾಲನೆಗೊಳಿಸತಕ್ಕದ್ದೆಂದು ಸದರಿ ಆದೇಶದಲ್ಲಿ ಆದೇಶಿಸಲಾಗಿರುತ್ತದೆ.

5. The Rights of Persons with Disabilities Act, 2016ರ ಕಲಂ 34(1)ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ ಶೇಕಡ 4ರಷ್ಟು ಕಡಿಮೆ ಇಲ್ಲದಂತೆ ಸಮತಳ ಮೀಸಲಾತಿಯನ್ನು ಕಲ್ಪಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಸದರಿ ಕಲಂನ್ನು ಕೆಳಗೆ ಉದ್ಧರಿಸಲಾಗಿದೆ:

> *"34. (1) Every appropriate Government shall appoint in every Government establishment, not less than four per cent of the total number of vacancies in the cadre strength in each group of posts meant to be filled with persons with benchmark disabilities of which, one per cent, each shall be reserved for persons with benchmark disabilities under clauses (a), (b) and (c) and one per cent for persons with benchmark disabilities under clauses (d) and (e), namely:*

www.ksge.in

*(a) blindness and low vision;*
*(b) deaf and hard of hearing;*
*(c) locomotor disability including cerebral palsy, leprosy cured, dwarfism, acid attack victims and muscular dystrophy;*
*(d) autism, intellectual disability, specific learning disability and mental illness;*
*(e) multiple disabilities from amongst persons under clauses (a) to (d) including deaf-blindness in the posts identified for each disabilities.*

*Provided that the reservation in promotion shall be in accordance with such instructions as are issued by the appropriate Government from time to time:*

*Provided further that the appropriate Government, in consultation with the Chief Commissioner or the State Commissioner, as the case may be, may, having regard to the type of work carried out in any Government establishment, by notification and subject to such conditions, if any, as may be specified in such notifications exempt any Government establishment from the provisions of this section."*

ಮೇಲ್ಕಂಡ ಅಧಿನಿಯಮದ ಕಲಂ 34(1)ರ ಆಸ್ಪದದನ್ವಯ, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ಕ್ಕೆ ದಿನಾಂಕ: 29.08.2020ರ ಅಧಿಸೂಚನೆ ಸಂಖ್ಯೆ :ಸಿಆಸುಇ 149 ಸನೆನಿ 2020ರಲ್ಲಿ ತಿದ್ದುಪಡಿ ಮಾಡಿ, ನಿಯಮ 2ರಲ್ಲಿ 'Person with Disability' ಎಂಬುದನ್ನು ಪರಿಭಾಷಿಸಲಾಗಿದೆ ಮತ್ತು ನಿಯಮ 9(1ಎ)ರಡಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ ವಿಕಲಚೇತನರಿಗೆ ಕಲ್ಪಿಸಿದ್ದ ಶೇಕಡ 3 ರಷ್ಟು ಮೀಸಲಾತಿಯನ್ನು ಶೇಕಡ 4 ರಷ್ಟಕ್ಕೆ ಹೆಚ್ಚಿಸಲಾಗಿದೆ ಮತ್ತು ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಮುಂದುವರಿಸಲಾಗಿರುತ್ತದೆ. ಬದಲಾದ ಈ ಸನ್ನಿವೇಶದಲ್ಲಿ, ಮೇಲೆ ಓದಲಾದ ದಿನಾಂಕ: 01.08.2009ರ ಮತ್ತು 10.06.2013ರ ಆದೇಶಗಳನ್ನು ಮಾರ್ಪಡಿಸುವುದು ಅಗತ್ಯವಾಗಿರುತ್ತದೆ.

6. ಮುಂದುವರೆದು, ಈ ಮೊದಲು ವೃಂದ-ಸಿ ಮತ್ತು ವೃಂದ-ಡಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಧತ್ವ / ಮಂದದೃಷ್ಟಿ ಇರುವ ವ್ಯಕ್ತಿಗಳಿಗೆ ನೀಡಲಾಗುತ್ತಿದ್ದ ಶೇಕಡ 2 ರಷ್ಟು ಮೀಸಲಾತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಮೆದುಳಿನ ಪಾರ್ಶ್ವವಾಯು, ಕುಷ್ಠರೋಗ ನಿವಾರಿತ ವ್ಯಕ್ತಿಗಳು, ಕುಬ್ಜತೆ, ಆಸಿಡ್ ದಾಳಿಗೆ ತುತ್ತಾದವರು ಮತ್ತು ಬಹುವಿಧ ಸ್ನಾಯು ಸವೆತ ಒಳಗೊಂಡಂತೆ ಚಲನವಲನ ವೈಕಲ್ಯತೆ ಉಳ್ಳವರಿಗೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ಇಲಾಖೆಯು 2001 ಮತ್ತು 2011 ರ ಜನಗಣತಿಯಲ್ಲಿ ಲಭ್ಯವಾದ ಅಂಗವೈಕಲ್ಯತೆವಾರು ದತ್ತಾಂಶವನ್ನು ತುಲನಾತ್ಮಕವಾಗಿ ಪರಿಗಣಿಸಿರುತ್ತದೆ. 1991 ರ ಜನಗಣತಿಯ ಸಂದರ್ಭದಲ್ಲಿ ಅಂಗವೈಕಲ್ಯತೆವಾರು ಗಣತಿ ನಡೆಸಿರುವುದಿಲ್ಲ. ರಾಜ್ಯದಲ್ಲಿ ದೃಷ್ಟಿದೋಷವುಳ್ಳ ಅಂಗವಿಕಲರ ಸಂಖ್ಯೆಯು 2001 ರ ಜನಗಣತಿಯ 4,40,875 ಕ್ಕೆ ಹೋಲಿಸಿದರೆ 2011 ರ ಜನಗಣತಿಯಲ್ಲಿ 2,64,170 ಕ್ಕೆ ಪರಿಣಾಮಕಾರಿಯಾಗಿ ಕುಸಿದಿರುತ್ತದೆ. ಆದರೆ ದೈಹಿಕ ಅಂಗವಿಕಲರ ಸಂಖ್ಯೆ 2001 ರಲ್ಲಿ 2,66,559 ಇದ್ದು, 2011 ರಲ್ಲಿ 2,71,982 ಕ್ಕೆ ಹೆಚ್ಚಳಗೊಂಡಿರುತ್ತದೆ. ಅಲ್ಲದೇ 'ಇತರೆ ಅಂಗವಿಕಲತೆ' ಮತ್ತು 'ಬಹುವಿಧದ ಅಂಗವಿಕಲತೆ' ಎಂಬ ವಿಭಾಗಗಳ ಅಡಿಯಲ್ಲಿಯೂ ಸಹ ದೈಹಿಕ ಅಂಗವಿಕಲ ವ್ಯಕ್ತಿಗಳನ್ನು ಪ್ರತ್ಯೇಕವಾಗಿ ಗಣತಿ ಮಾಡಲಾಗಿರುತ್ತದೆ. ಆದಕಾರಣ, ಇಲಾಖೆಯ ನಿರ್ದೇಶಕರು ದೈಹಿಕ ಅಂಗವಿಕಲರ ಒಟ್ಟು ಸಂಖ್ಯೆಯನ್ನು 4,45,348 ಎಂದು ಪರಿಗಣಿಸಬಹುದಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅಂದರೆ 2011 ರ ಜನಗಣತಿಯ ಸಂದರ್ಭದಲ್ಲಿ ಕರ್ನಾಟಕ

www.ksge.in

ರಾಜ್ಯದ ಒಟ್ಟು ಜನಸಂಖ್ಯೆ 6,10,95,297 ಆಗಿದ್ದು, ಅದರಲ್ಲಿ ಶೇಕಡ 0.43 ರಷ್ಟು ದೃಷ್ಟಿದೋಷವುಳ್ಳ ಅಂಗವಿಕಲರು ಹಾಗೂ ಶೇಕಡ 0.73 ರಷ್ಟು ದೈಹಿಕ ಅಂಗವಿಕಲರು ಇರುತ್ತಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 149 ಎಸ್‌ಆರ್‌ಆರ್ 2020**
**ಬೆಂಗಳೂರು, ದಿನಾಂಕ:25.09.2020**

7. ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ / ವಿಕಲಚೇತನರಿಗೆ ನಿಗದಿಪಡಿಸಿರುವ ಶೇಕಡ 5ರ ಸಮತಳ ಮೀಸಲಾತಿಯನ್ನು The Rights of Persons with Disabilities Act, 2016ರ ಕಲಂ 34(1)ರಲ್ಲಿ ಗೊತ್ತುಪಡಿಸಲಾದಂತೆ ಈ ಕೆಳಕಂಡ ವಿಕಲಚೇತನ ಅಭ್ಯರ್ಥಿಗಳಿಗಾಗಿ ಕೆಳಕಂಡ ಪ್ರಮಾಣದಲ್ಲಿ ಗುರುತಿಸತಕ್ಕದ್ದೆಂದು ಹಾಗೂ ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ:04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸನೆನಿ 2007 ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಈ ಕೆಳಗೆ ಗುರುತಿಸಲಾದ ಬಿಂದುಗಳಲ್ಲಿ ಅನುಕ್ರಮವಾಗಿ ಮೀಸಲಿರಿಸತಕ್ಕದ್ದು ಎಂದು ಈ ಮೂಲಕ ಆದೇಶಿಸಲಾಗಿದೆ:

| ಕ್ರಮ ಸಂಖ್ಯೆ | ವೈಕಲ್ಯತೆಯ ಸ್ವರೂಪ | ಗುರುತಿಸಲಾದ ಶೇಕಡವಾರು | ಗುರುತಿಸಲಾದ ಬಿಂದು |
|---|---|---|---|
| 1 | Blindness and low vision | 1% | 4 |
| 2 | Locomotor disability including cerebral palsy, leprosy cured, dwarfism, acid attack victims and muscular dystrophy | 2% | 24 ಮತ್ತು 84 |
| 3 | Deaf and hard of hearing | 1% | 44 |
| 4 | Autism, intellectual disability, specific learning disability and mental illness | 1% | 64 |
| 5 | Multiple disabilities from amongst persons under clauses (a) to (d) including deaf-blindness in the posts identified for each disabilities | | |

8. ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ವಿಕಲಚೇತನರಿಗೆ ಕಲ್ಪಿಸಿರುವ ಶೇಕಡ 4 ರಷ್ಟು ಸಮತಳ ಮೀಸಲಾತಿಯನ್ನು The Rights of Persons with Disabilities Act, 2016ರ ಕಲಂ 34(1)ರಲ್ಲಿ ಗೊತ್ತುಪಡಿಸಲಾದಂತೆ ಈ ಕೆಳಕಂಡ ವಿಕಲಚೇತನ ಅಭ್ಯರ್ಥಿಗಳಿಗಾಗಿ ಕೆಳಕಂಡ ಪ್ರಮಾಣದಲ್ಲಿ ಗುರುತಿಸತಕ್ಕದ್ದೆಂದು ಹಾಗೂ ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ: 04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸನೆನಿ 2007ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಈ ಕೆಳಗೆ ಗುರುತಿಸಲಾದ ಬಿಂದುಗಳಲ್ಲಿ ಅನುಕ್ರಮವಾಗಿ ಮೀಸಲಿರಿಸತಕ್ಕದ್ದು ಎಂದು ಈ ಮೂಲಕ ಆದೇಶಿಸಲಾಗಿದೆ:

www.ksge.in

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕ್ರಮ ಸಂಖ್ಯೆ | ವೈಕಲ್ಯತೆಯ ಸ್ವರೂಪ | ಗುರುತಿಸಲಾದ ಶೇಕಡವಾರು | ಗುರುತಿಸಲಾದ ಬಿಂದು |
|---|---|---|---|
| 1 | Blindness and low vision | 1% | 4 |
| 2 | Locomotor disability including cerebral palsy, leprosy cured, dwarfism, acid attack victims and muscular dystrophy | 1% | 24 |
| 3 | Deaf and hard of hearing | 1% | 44 |
| 4 | Autism, intellectual disability, specific learning disability and mental illness | 1% | 64 |
| 5 | Multiple disabilities from amongst persons under clauses (a) to (d) including deaf-blindness in the posts identified for each disabilities | | |

9. ಒಂದು ವೇಳೆ ಅಧಿಸೂಚಿಸಿರುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು (Carry forward). ಮುಂದಿನ ನೇಮಕಾತಿಯಲ್ಲಿಯೂ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ಮೀಸಲಾತಿಯಡಿ ಬರುವ ಆಯಾ ಪ್ರವರ್ಗದ ಇತರ ಅಂಗವಿಕಲತೆಯುಳ್ಳ ಅರ್ಹ ಅಂಗವಿಕಲ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಯಾವುದೇ ಅಂಗವಿಕಲ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅರ್ಹ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

10. ಈ ಆದೇಶವು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ವಿ. ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-2).

www.ksge.in

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE